**<u>ಪಿ.ಡಬ್ಲ್ಯೂಃ1</u>**

**<u>ದಿಃ 25.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ. ಎಸ್ ಎಚ್ ವಕೀಲರಿಂದಃ</u>**

ಪಿರ್ಯಾದಿ ಪರ ವಕೀಲರು ಸಂಜ್ಞೆಗೂ ಮುಂಚೆ ಪಿರ್ಯಾದಿ ಸಲ್ಲಿಸಿದ ಸ್ವಪ್ರಮಾಣೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಸ್ವಪ್ರಮಾಣೀಕೃತ ಹೇಳಿಕೆಯನ್ನು ಪಿರ್ಯಾದಿಯ ಮುಖ್ಯ ವಿಚಾರಣಾ ಪ್ರತಿಜ್ಞಾ ಲೇಖಾ ಎಂದು ಪರಿಗಣಿಸಲು ಮನವಿ ಸಲ್ಲಿಸಿದ್ದು ಪರಿಶೀಲಿಸಿ, ಮನವಿಯನ್ನು ಪುರಸ್ಕರಿಸಿ ಪಿರ್ಯಾದಿ ಈ ಮುಂಚೆ ಸಲ್ಲಿಸಿದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಸಾಕ್ಷಿ ಮುಖ್ಯ ವಿಚಾರಣಾ ಪ್ರತಿಜ್ಞಾ ಲೇಖಾ ಎಂದು ಪರಿಗಣಿಸಲಾಯಿತು.

ಆರೋಪಿಯು ನೀಡಿದ ಚೆಕ್ಕನ್ನು ನಿಪಿ. 1 ಎಂದು, ಆರೋಪಿಯ ಸಹಿಯನ್ನು ನಿಪಿ. 1(ಎ) ಎಂದು, ಚೆಕ್ ಡೆಪಾಸಿಟ್ ಸ್ಲಿಪ್‌ನ್ನು ನಿಪಿ.2 ಎಂದು, ಬ್ಯಾಂಕ್ ಹಿಂಬರಹವನ್ನು ನಿಪಿ. 3 ಎಂದು, ಆರೋಪಿಗೆ ಕಳುಹಿಸಿದ ನೋಟೀಸಿನ ಕಚೇರಿ ಪ್ರತಿಯನು ನಿಪಿ.4 ಎಂದು, ಅಂಚೆ ರಸೀದಿಯನ್ನು ನಿಪಿ. 5 ಎಂದು, ಹಿಂದಿರುಗಿ ಬಂದ ಅಂಚೆ ಲಕೋಟೆಯನ್ನು ನಿಪಿ .6 ಎಂದು, ಒಳಗಿನ ನೋಟಿನಸ್ ಪ್ರತಿಯನ್ನು ನಿಪಿ.6(ಎ) ಎಂದು, ಪಹಣಿಯನ್ನು ನಿಪಿ.7 ಎಂದು, ದೂರನ್ನು ನಿಪಿ.8 ಎಂದು ಗುರುತಿಸಲಾಯಿತು.

ಪಿರ್ಯಾದಿಯ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

ಆರೋಪಿ ಪರ ವಕೀಲರು ಕಲಂ 145(2) ಎನ್ ಐ ಆ್ಯಕ್ಟ್ ರಡಿ ಅರ್ಜಿಯನ್ನು ಸಲ್ಲಿಸಿ ಪಾಟೀ ಸವಾಲಿಗೇ ಸಮಯ ಕೋರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.